# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1197 (1299) (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವರ್ಗಾಯಿಸಲಾದ ಪ್ರಶ್ನೆ) |
| 2 | ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ: | : | 22-08-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಾಮಫಲಕಗಳಲ್ಲಿ ಶೇಕಡ 60ರಷ್ಟು ಕನ್ನಡ ಬಳಸುವಂತೆ ಸರ್ಕಾರವು ಕಾನೂನು ಜಾರಿಗೊಳಿಸಿದ್ದರೂ ಸಹ ಬೆಂಗಳೂರಿನ ಬಹುತೇಕ ವಾಣಿಜ್ಯ ಮಳಿಗೆಗಳ ನಾಮಫಲಕಗಳು ಇಂಗ್ಲೀಷ್‌ನಲ್ಲಿಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ಹಾಗೂ ಎಫ್.ಐ.ಆರ್ ಹಾಗೂ ಇನ್ನಿತರ ಪ್ರಕರಣಗಳ ದಾಖಲಾತಿ ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಉದ್ದಿಮೆಗಳಿಗೆ ನಾಮಫಲಕಗಳಲ್ಲಿ ಶೇ. 60 ರಷ್ಟು ಕನ್ನಡ ಅಕ್ಷರಗಳನ್ನು ಬಳಸುವಂತೆ ಒಟ್ಟು 40,276 ಉದ್ದಿಮೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಆ) | ಶೇಕಡ 60ರಷ್ಟು ಕನ್ನಡ ಬಳಸುವಂತೆ ಸರ್ಕಾರವು ಕಾನೂನು ಜಾರಿಗೊಳಿಸಿದ್ದಾಗಿನಿಂದಲೂ ಇಲ್ಲಿಯವರೆಗೆ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ; ಈ ಕುರಿತು ಸರ್ಕಾರದ ಕ್ರಮವೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು 364 ಉದ್ದಿಮೆಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಸದರಿ ಉದ್ದಿಮೆದಾರರು ಕನ್ನಡ ನಾಮಫಲಕಗಳನ್ನು ಅಳವಡಿಸಲು ಕಾಲಾವಕಾಶವನ್ನು ಕೋರಿರುತ್ತಾರೆ. ನೋಟೀಸ್ ನೀಡಿದ ನಂತರವೂ ಸರಿಪಡಿಸಿಕೊಳ್ಳದೆ ಇರುವ 15 ಮಳಿಗೆಗಳನ್ನು ಮುಚ್ಚಿಸಲಾಗಿರುತ್ತದೆ. |
| ಇ) | ಈ ಸಂಬಂಧ ನೋಟೀಸ್ ನೀಡಿದ ನಂತರವೂ ಸರಿಪಡಿಸಿಕೊಳ್ಳದೆ ಇರುವ ಮಳಿಗೆಗಳ ಸಂಖ್ಯೆ ಎಷ್ಟು; | |
| ಈ) | ಕನ್ನಡಕ್ಕೆ ಆದ್ಯತೆ ನೀಡದ ಮಳಿಗೆಗಳ ಪರವಾನಿಗೆಯನ್ನು ರದ್ದು ಮಾಡಲಾಗಿದೆಯೇ; ಮಾಡಿದ್ದಲ್ಲಿ ಮಳಿಗೆಗಳ ಸಂಪೂರ್ಣ ಮಾಹಿತಿ ಪ್ರತಿಗಳೊಂದಿಗೆ ನೀಡುವುದು, ಮಾಡದೇ ಇದ್ದಲ್ಲಿ ಕಾರಣಗಳೇನು; | |

**ಸಂಖ್ಯೆ:ನಅಇ 338 ಬಿಬಿಎಲ್ 2025**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ